ಓ.ಎಸ್. ನಂ. 180/2014

ಪಿ.ಡಬ್ಲ್ಯು: 01

ದಿನಾಂಕಃ 25-11-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ – ಶ್ರೀ ಎಸ್.ಎಂ.ಎಸ್. ವಕೀಲರಿಂದ.

ದಾವಾ ಆಸ್ತಿಯ ಸರ್ವೆ ನಂ. 805 ಎ/ಬಿ. ಸದರಿ ಆಸ್ತಿಯ ವಿಸ್ತೀರ್ಣಃ 05 ಎಕರೆ 15 ಸೆಂಟ್ಸ್ ಇರುತ್ತದೆ. ಪ್ರತಿವಾದಿ ಕೊಟ್ರಮ್ಮ ಇವರು ಅರೆಮಾನಸಿಕ ಅಸ್ವಸ್ಥೆ ಎಂದರೆ ಸರಿ. ದಾವಾ ಆಸ್ತಿಯು ನನಗೆ ದಾನಪತ್ರದ ಮುಖಾಂತರ ಬಂದಿರುತ್ತದೆ. ಸದರಿ ದಾನಪತ್ರ 1987 ರಲ್ಲಿ ಆಗಿರುತ್ತದೆ. ಸದರಿ ದಾನಪತ್ರವನ್ನು ನನ್ನ ಅಜ್ಜಿ ಗುರುಸಿದ್ದಮ್ಮ ಇವರು ಬರೆದುಕೊಟ್ಟಿರುತ್ತಾರೆ. ಸದರಿ ಗುರುಸಿದ್ದಮ್ಮ ಇವರಿಗೆ ದಾವಾ ಆಸ್ತಿಯು ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ದಾವಾ ಆಸ್ತಿಯು ಗುರುಸಿದ್ದಮ್ಮ ಇವರ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಗುರುಸಿದ್ದಮ್ಮ ಇವರ ಸ್ವಂತ ಆಸ್ತಿ ಅಲ್ಲ ಎಂದರೆ ಸರಿಯಲ್ಲ.

ಈ ಮೇಲೆ ಹೇಳಿದ ಗುರುಸಿದ್ದಮ್ಮ ಇವರ ಗಂಡನ ಹೆಸರು ಸಿದ್ದಪ್ಪ ಎಂದರೆ ಸರಿ. ಸದರಿ ಸಿದ್ದಪ್ಪನವರ ಅಣ್ಣನ ಹೆಸರು ಕವಳಪ್ಪ ಎಂದರೆ ಸರಿ.  ಸಿದ್ದಪ್ಪ ಮತ್ತು ಕವಳಪ್ಪ ಇವರು ಬಸಪ್ಪ ಮತ್ತು ಬಸಮ್ಮನವರ ಮಕ್ಕಳು ಎಂದರೆ ಸರಿ.  ಕವಳಪ್ಪನವರ ಹೆಂಡತಿ ಹೆಸರು ತಿಪ್ಪಮ್ಮ ಎಂದರೆ ಸರಿ. ಪ್ರತಿವಾದಿ ಕೊಟ್ರಮ್ಮ ಇವರು ಕವಳಪ್ಪ ಮತ್ತು ತಿಪ್ಪಮ್ಮ ಇವರ ಒಬ್ಬಳೇ ಮಗಳು ಎಂದರೆ ಸರಿ. ಗುರುಸಿದ್ದಮ್ಮ ಮತ್ತು ಸಿದ್ದಪ್ಪ ಇವರಿಗೆ ಮಕ್ಕಳಿರಲಿಲ್ಲ ಎಂದರೆ ಸರಿ. ಸದರಿ ಗುರುಸಿದ್ದಮ್ಮನವರ ಗಂಡನಾದ ಸಿದ್ದಪ್ಪ ಇವರು 1985 ರಲ್ಲಿ ನಿಧನ ಹೊಂದಿರುತ್ತಾರೆ ಎಂದರೆ ಸರಿ. ಗುರುಸಿದ್ದಮ್ಮ ಇವರು 1990 ರಲ್ಲಿ ನಿಧನ ಹೊಂದಿರುತ್ತಾರೆ ಎಂದರೆ ಸರಿ.

ಈ ಮೇಲೆ ಹೇಳಿದ ಸಿದ್ದಪ್ಪ ಮತ್ತು ಕವಳಪ್ಪ ಇವರು ತಮ್ಮ ಜೀವಿತ ಕಾಲಾವಧಿಯಲ್ಲಿ ಒಟ್ಟಾಗಿ ಇದ್ದರು ಎಂದರೆ ಸರಿಯಲ್ಲ. ನಾನು ಸಿದ್ದಪ್ಪ ಮತ್ತು ಕವಳಪ್ಪ ಇವರನ್ನು ನೋಡಿರುವುದಿಲ್ಲ. ಸಿದ್ದಪ್ಪ ಮತ್ತು ಕವಳಪ್ಪ ಇವರು ಜಂಟಿ ಕುಟುಂಬದಲ್ಲಿ ಇದ್ದಾಗ, ಜಂಟಿ ಕುಟುಂಬದ ಆದಾಯದಿಂದ ದಾವಾ ಆಸ್ತಿಯನ್ನು ಮತ್ತು ಇತರೆ ಆಸ್ತಿಗಳನ್ನು ಗುರುಸಿದ್ದಮ್ಮ ಇವರ ಹೆಸರಿನಲ್ಲಿ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ.

ಪ್ರತಿವಾದಿ ಕೊಟ್ರಮ್ಮ ಇವರು ಸಿದ್ದಪ್ಪ ಮತ್ತು ಗುರುಸಿದ್ದಮ್ಮ ಇವರನ್ನು ಅವರ ಜೀವಿತ ಕಾಲಾವಧಿಯಲ್ಲಿ ನೋಡಿಕೊಂಡಿದ್ದರು ಎಂದರೆ ಸಾಕ್ಷಿಯು ತಾವು ನೋಡಿಕೊಂಡಿರುವುದಾಗಿ ನುಡಿಯುತ್ತಾರೆ. ಗುರುಸಿದ್ದಮ್ಮ ಮತ್ತು ನಮಗೆ ಸಂಬಂಧ ಇಲ್ಲ, ನಾವು ಬೇರೆ-ಬೇರೆ ಎಂದರೆ ಸರಿ.

ಪ್ರತಿವಾದಿ ಕೊಟ್ರಮ್ಮ ಅರೆಮಾನಸಿಕ ವ್ಯಕ್ತಿಯಾಗಿದ್ದ ಕಾರಣ, ಈ ಮೇಲೆ ಹೇಳಿದ ದಾನಪತ್ರವನ್ನು ನನ್ನ ಪರವಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ, ಆದ್ದರಿಂದ ಸದರಿ ದಾನಪತ್ರದ ಆಧಾರದ ಮೇಲೆ ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಲಭಿಸುವುದಿಲ್ಲ ಎಂದರೆ ಸರಿಯಲ್ಲ. ಈ ದಿನದವರೆಗೂ ದಾವಾ ಆಸ್ತಿಯಲ್ಲಿ ಪ್ರತಿವಾದಿ ಕೊಟ್ರಮ್ಮ ಇವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ತಾನು ಸ್ವಾಧೀನದಲ್ಲಿ ಇರುವುದಾಗಿ ನುಡಿಯುತ್ತಾರೆ.

ನನ್ನ ಅಜ್ಜಿ ಗುರುಸಿದ್ದಮ್ಮ ಇವರಿಗೆ ಓದು-ಬರಹ ಗೊತ್ತಿರುವುದಿಲ್ಲ ಎಂದರೆ ಸರಿ. ಈ ಮೇಲೆ ಹೇಳಿದ ದಾನಪತ್ರದಲ್ಲಿರುವ ಹೆಬ್ಬಟ್ಟಿನ ಗುರುತನ್ನು ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಸಲುವಾಗಿ ಸುಳ್ಳು ದಾಖಲೆ ಸೃಷ್ಟಿ ಮಾಡಿ, ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು-ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.